(ii) re ; Adverse Seasonal Conditions in Shikaripur Taluk

SRI K. YENKATAPPA (Shikaripur).— I call the attention of the Minister for Revenue to the hardship caused to the people of Shikaripur Taluk due to adverse seasonal conditions in t at area.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆ ಈ ರೀತಿ ಇದೆ.

ಸಾಗರ ವಿಭಾಗದ ಅಸಿಸ್ಟೆಂಟ್ ಕಮಿಶನರೂ ಮತ್ತು ತಾಲ್ಲೂಕು ತಾಹಸೀಲ್ದಾರರೂ, ಶಿಕಾರಿಪುರ ತಾಲ್ಲೂಕಿನಲ್ಲಿ ವ್ಯಾಪಕವಾಗಿ ಸಂಚಾರಮಾಡಿ, ಈ ತಾಲ್ಲೂಕಿನ ಯಾವ ಭಾಗದಲ್ಲಿಯೇ ಆಗಲಿ ಋತುಮಾನ ಪರಿಸ್ಥಿತಿಯು ಹದಗೆಟ್ಟಿರುವ ಅಂಶ ತಮಗೆ ಕಂಡು ಬಂದಿಲ್ಲವೆಂದು ತಿಳಿಸಿರುತ್ತಾರೆ. ಉದಗಣಿ, ತಲಗುಡ್ಡ ಮತ್ತು ಹೊಸೂರು ಹೋಬಳಿಗಳ ಕೆಲವು ಹಳ್ಳಿಗಳಲ್ಲಿ ನೀರಾವರಿ ಬತ್ತದ ಬೆಳೆಯು ನಿರೀಕ್ಷಿಸಿದಷ್ಟು ಫಲ ಕೊಡಲಿಲ್ಲ, ಆದರೆ ಕುಷ್ಕಿ ಬೆಳೆಯ ಪರಿಸ್ಥಿತಿ ಉತ್ತಮವಾಗಿದ್ದು ಹೆಚ್ಚು ಇಳುವರಿ ಧಾನ್ಯ ರೈತನ ಕೈಸೇರಿದೆ. ಅದಕ್ಕಾಗಿ ಭೂ ಕಂದಾಯ ಮತ್ತು ತಕಾವಿ ಸಾಲದ ವಸೂಲಿಯನ್ನು ಮುಂದೂಡುವಷ್ಟು ಪರಿಸ್ಥಿತಿ ಕೆಟ್ಟಿಲ್ಲವೆಂದು ತಿಳಿದುಬಂದಿದೆ. ಭೂ ಕಂದಾಯ ಮತ್ತು ತಕಾವಿ ಸಾಲದ ಬಾಕಿ ವಸೂಲಾತಿಗಳಿಗೆ ಸ್ಥಳೀಯ ಅಧಿಕಾರಿಗಳಿಗೆ ಯಾವ ಅಡಚಣೆಯೂ ಆಗಿಲ್ಲ. ಈ ಕಾರಣಗಳಿಂದ ಶಿಕಾರಿಪುರ ತಾಲ್ಲೂಕಿನ ಯಾವ ಭಾಗದಲ್ಲಿಯೇ ಆಗಲಿ ಪರಿಹಾರ ಕಾಮಗಾರಿಗಳನ್ನೂ ತೆಗೆದು ಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಶ್ರೀ ಕೆ. ಯೆಂಕಟಪ್ಪ.— ಸ್ವಾಮಿ, ತಾವು ಬಹಳ ವ್ಯಾಪಕವಾಗಿ ಪ್ರವಾಸ ಮಾಡಿದ್ದೇನೆಂದು ಹೇಳುತ್ತಿದ್ದೀರಿ. ತಾವು ಹೇಳಿರತಕ್ಕ ಉದಗಣಿ, ತಲಗಟ್ಟ ಮತ್ತು ಹೊಸೂರು ಹೋಬಳಿಗಳಲ್ಲಿ ತಾವು ಎಷ್ಟೋ ಸಲ ಬಂದಾಗ ಅಲ್ಲಿಯ ರೈತರು ಹಲವಾರು ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಬೇಡಿಕೆಗಳನ್ನು ಇಟ್ಟಾಗ ಅಧಿಕಾರಿಗಳಿಗೆ ಸೂಕ್ತವಾದ ತನಿಖೆ ಮಾಡಿ ವರದಿಯನ್ನು ಕೊಡಲಿಕ್ಕೆ ಹೇಳಿರುವಿರಿ. ಆದರೆ ಇಲ್ಲಿಯವರೆಗೂ ವರದಿ ಬಂದಿಲ್ಲ. ಕಂದಾಯ ಕೊಟ್ಟಿದ್ದು ನೋಡಿದರೆ ಖಂಡಿತವಾಗಿಯೂ ಅನಿಸುತ್ತದೆ, ಅಲ್ಲಿರತಕ್ಕ ಪ್ರದೇಶಗಳಲ್ಲಿ ಮಳೆ ಬಾರದೆ ಕೆಲವು ಭಾಗಗಳಲ್ಲಿ ಬೆಳೆ ಬಂದಿಲ್ಲ, ಫಸಲು ಆಗಿಲ್ಲ. ಅಲ್ಲಿರತಕ್ಕ ಸುಮಾರು ಹಳ್ಳಿಗಳಲ್ಲಿ ನಾಲ್ಕು ಲಕ್ಷದಷ್ಟು ಕಂದಾಯ ವಸೂಲಾಗಿದೆ. ಯಾರು ಯಾರು ಬೆಳೆ ಬೆಳೆದಿದ್ದಾರೆ ಅವರು ಕಂದಾಯವನ್ನು ಕೊಟ್ಟಿದ್ದಾರೆ. ಯಾರು ಬೆಳೆ ಬೆಳೆದಿಲ್ಲ ಅವರಿಗೆ ಕಂದಾಯವನ್ನು ಕೊಡುವುದಕ್ಕೆ ತೊಂದರೆಯಾಗಿದೆ. ಆದ್ದರಿಂದ ಅಧಿಕಾರಿಗಳು ಏನು ವರದಿ ಕೊಟ್ಟಿದ್ದಾರೆ, ಆ ವರದಿಯನ್ನು ತರಿಸಿ ನೋಡಬೇಕು. ಮತ್ತು ಅದರ ಬಗ್ಗೆ ತಕ್ಷಣ ಶೀಘ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು ಬೆಳೆ ಆದರೆ ಸರ್ಕಾರಕ್ಕೆ ಟ್ಯಾಕ್ಸ್ ಕೊಡಲಿಕ್ಕೆ ಏನೂ ತೊಂದರೆ ಇಲ್ಲ, ವಾಟರ್ ರೇಟ್ ಏನು ಕೇಳುತ್ತಿದ್ದೀರಿ, ಅದು ಸರಿಯಾದುದಲ್ಲವೆಂದು ನನ್ನ ಭಾವನೆ. ಬೆಳೆ ಆದರೆ ರೈತರು ಕಂದಾಯವನ್ನು ಕೊಡುವುದಕ್ಕೆ ತಯಾರಿದ್ದಾರೆ ೧೦-೧೫ ವರ್ಷಗಳಿಂದ ಇರುವ ತಕಾವಿ ಲೋನ್ ಮತ್ತು ವಾಟರ್ ರೇಟ್‌ಗಳನ್ನು ಏನು ಕೇಳಿದ್ದೀರಿ, ಅವುಗಳನ್ನು ಕಂತುಗಳ ಮೇಲೆ ಕೊಡಲು ಅವಕಾಶ ಮಾಡಿಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ವಾಟರ್ ರೇಟ್ ಬಗ್ಗೆ ಹೇಳುವುದಾದರೆ ತರಿ ಬೆಳೆ ಇರತಕ್ಕ ಪ್ರದೇಶಗಳಲ್ಲಿ ಕೆಲವು ಭಾಗದಲ್ಲಿ ಭತ್ತದ ಬೆಳೆ ಕಡಿಮೆಯಾಗಿದೆ ಎಂದು ವರದಿಯಲ್ಲಿ ಓದಿದ್ದೇನೆ. ಅಂತಹ ಪರಿಸ್ಥಿತಿ ಇರತಕ್ಕ ಸ್ಥಳಗಳಲ್ಲಿ ವಾಟರ್ ರೇಟ್ ತೆಗೆದುಕೊಳ್ಳುವುದು ಸೂಕ್ತವೇ ಅಥವಾ ಇಲ್ಲವೇ ಎನ್ನುವುದನ್ನು ಅಸಿಸ್ಟೆಂಟ್ ಕಮಿಷನರ್ ಮತ್ತು ಎಕ್ಸೆಕ್ಯುಟೀವ್ ಇಂಜನಿಯರ್ ಅವರಿಂದ ವರದಿ ತರಿಸಿಕೊಂಡು ಅದರಂತೆ ಕ್ರಮ ತೆಗೆದುಕೊಳ್ಳುತ್ತೇನೆ. ಉಳಿದದ್ದು ಖುಷ್ಕಿ ಬೆಳೆ ಆಗಿದೆ ಎಂದು ತಿಳಿದುಬಂದಿರುವುದರಿಂದ ತಕಾವಿ ಸಾಲ, ಉಳಿದ ಸಾಲಗಳನ್ನು ಮುಂದಕ್ಕೆ ಹಾಕುವುದು ಸ್ವಲ್ಪ ಕಷ್ಟವಾಗುತ್ತದೆ.

(iii) re : Scarcity of drinking Water in Tadas village Shiggaon Taluk

SRI M. M. NADAF (Shiggaon).— I call the attention of the Minister for Rural Development and Social Welfare to the scarcity of drinking water in Tadas Village of Shiggaon Taluk :

SRI N. RACHAIAH (Minister for Social Welfare and Community Development).—Sir I wish to make the following statement :